# ಅನುವಾದ ಸಂಪದ'ದ ಕುರಿತ ನೀತಿನಿಯಮಗಳು

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ("ವಿಶ್ವವಿದ್ಯಾಲಯ") ಶೈಕ್ಷಣಿಕ ಸಂಪನ್ಮೂಲಗಳನ್ನು ಸುಲಭವಾಗಿ ಲಭ್ಯವಾಗಿಸುವ ಉದ್ದೇಶದಿಂದ ಅನುವಾದಿತ ಶೈಕ್ಷಣಿಕ ಸಾಮಗ್ರಿಗಳ ಒಂದು ಕಣಜವನ್ನು ("ರೆಪಾಸಿಟರಿ") ರೂಪಿಸಿದೆ. ಕಣಜದಲ್ಲಿ ಸಂಗ್ರಹವಾಗಿರುವ ಸಂಪನ್ಮೂಲಗಳ ಲಭ್ಯತೆ ಮತ್ತು ಬಳಕೆಯು (ಇಲ್ಲಿಂದಾಚೆಗೆ ವ್ಯಾಖ್ಯಾನಿಸಿರುವಂತೆ) ಇದಕ್ಕೆ ಸಂಬಂಧಿಸಿದ ನೀತಿ ನಿಯಮಗಳಿಗೆ ಒಳಪಟ್ಟಿರುತ್ತದೆ.

ಅನುವಾದ ಸಂಪದದ ಸಂಪನ್ಮೂಲಗಳ ಬಳಕೆ:

1. ಕಣಜವು ಹಿಂದಿ ಮತ್ತು ಕನ್ನಡ ಭಾಷೆಯಲ್ಲಿ ಅನುವಾದಿಸಲಾದ ಶೈಕ್ಷಣಿಕ ಸಂಪನ್ಮೂಲ/ಗಳನ್ನು ಒಳಗೊಂಡಿದೆ ("ಸಂಪನ್ಮೂಲಗಳು"). ಸಂಪನ್ಮೂಲ/ಗಳು ಸಾರ್ವಜನಿಕರಿಗೆ ಉಚಿತವಾಗಿ ಲಭ್ಯವಿರುತ್ತವೆ.

2. ಕಣಜದ ಸಂಪನ್ಮೂಲ/ಗಳನ್ನು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಂತೆ ಯಾರು ಬೇಕಾದರೂ ಬಳಸಬಹುದು. ಅಂದರೆ ಡೌನ್‌ಲೋಡ್ ಅಥವಾ ನಕಲು ಮಾಡುವುದು, ಪುನರುತ್ಪಾದನೆ ಅಥವಾ ಮರುಪ್ರಕಟಣೆ ಅಥವಾ ಮಾರ್ಪಾಡು ಮಾಡುವುದು, ಇತರರೊಂದಿಗೆ ಹಂಚಿಕೊಳ್ಳಲು ಪೋಸ್ಟ್ ಅಥವಾ ಪ್ರಸಾರ ಅಥವಾ ವಿತರಣೆ ಮಾಡುವುದು, ಅಥವಾ ಇತರ ಯಾವುದೇ ರೀತಿಯಲ್ಲಿ ಬಳಸಬಹುದು. ಈ ಕುರಿತ ಷರತ್ತುಗಳು ಕೆಳಗಿನಂತಿವೆ:

   i. ಈ ಮೇಲೆ ತಿಳಿಸಿದ ರೀತಿಯಲ್ಲಿ ಸಂಪನ್ಮೂಲ/ಗಳನ್ನು ಮರುಬಳಸಿದ ಸಂದರ್ಭದಲ್ಲಿ ಅದರ ಮೂಲ ಲೇಖಿನ ಮತ್ತು ಅನುವಾದ ಸಂಪದಕ್ಕೆ ಯಥಾರ್ಥವಾಗಿ ಆಭಾರ ಮನ್ನಣೆ ಸಲ್ಲಿಸತಕ್ಕದ್ದು.
   ii. ಸಂಪನ್ಮೂಲ/ಗಳನ್ನು ವಾಣಿಜ್ಯೇತರ, ಸಂಶೋಧನೆ, ವೈಯಕ್ತಿಕ, ಶೈಕ್ಷಣಿಕ ಅಥವಾ ಲಾಭರಹಿತ ಉದ್ದೇಶಗಳಿಗಾಗಿ ಮಾತ್ರ ಬಳಸತಕ್ಕದ್ದು; ಮತ್ತು
   iii. ಸಂಪನ್ಮೂಲ/ಗಳು ಅನ್ವಯವಾಗುವ ಎಲ್ಲ ಕಡೆಗಳಲ್ಲಿ ಪೂರ್ವನಿಗದಿತ ಪರವಾನಗಿ ಷರತ್ತುಗಳ ಅಡಿಯಲ್ಲಿಯೇ ಬರುವುದರಿಂದ ಆಯಾ ಪರವಾನಗಿ ಷರತ್ತುಗಳಿಗೇ ಒಳಪಟ್ಟಿರುತ್ತದೆ/ವೆ.

1. ಕಣಜದ ಸಂಪನ್ಮೂಲಗಳನ್ನು ಅನುಮತಿಸಲಾದ ಉದ್ದೇಶಗಳನ್ನು ಹೊರತುಪಡಿಸಿ, ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಯಾವುದೇ ಮಾಧ್ಯಮದಲ್ಲಿ ಬಳಸತಕ್ಕದ್ದಲ್ಲ. ಅನುಮತಿಗಾಗಿ repository.ti@apu.edu.in ಇಲ್ಲಿ ಸಂಪರ್ಕಿಸಬಹುದಾಗಿದೆ.

ಹಕ್ಕು ನಿರಾಕರಣೆ:

- ಅನುವಾದ ಸಂಪದದಲ್ಲಿ ಪ್ರಕಟವಾದ ಎಲ್ಲ ಕೃತಿಗಳು ಆಯಾ ಲೇಖಕರು, ಪ್ರಕಾಶಕರು ಅಥವಾ ಹಕ್ಕುಸ್ವಾಮ್ಯ ಹೊಂದಿರುವವರ ಬೌದ್ಧಿಕ ಆಸ್ತಿಯಾಗಿದೆ. ಅನುವಾದ ಸಂಪದವು ವಾಣಿಜ್ಯೇತರ

ಉದ್ದೇಶಗಳಿಗಾಗಿ ಮಾತ್ರ ಈ ಸಂಪನ್ಮೂಲ/ಗಳು ಮತ್ತು ಪುಸ್ತಕಗಳನ್ನು ಬಳಸಿಕೊಳ್ಳಲು ವೇದಿಕೆಯನ್ನು ಒದಗಿಸುತ್ತದೆ. ಪುಸ್ತಕ/ಸಂಪನ್ಮೂಗಳನ್ನು ಪಡೆದುಕೊಳ್ಳುವ ಅಥವಾ ಬಳಸಿಕೊಳ್ಳುವ ಬಳಕೆದಾರರಿಗೆ ಇಲ್ಲಿನ ಪುಸ್ತಕ/ಲೇಖನಗಳ ಯಾವುದೇ ಮಾಲೀಕತ್ವದ ಹಕ್ಕು ಅಥವಾ ಹಕ್ಕುಸ್ವಾಮ್ಯದ ಸವಲತ್ತುಗಳು ವರ್ಗಾವಣೆಯಾಗುವುದಿಲ್ಲ.

- ಬಹುತೇಕ ಸಂದರ್ಭಗಳಲ್ಲಿ, ವಿಶ್ವವಿದ್ಯಾಲಯವು ಕಣಜದಲ್ಲಿರುವ ಸಂಪನ್ಮೂಲಗಳು ಮುಕ್ತ-ಸಂಪನ್ಮೂಲವಾಗಿ ಲಭ್ಯವಾಗುವಂತೆ ಮಾಡಲು, ಪಠ್ಯ/ಸಂಪನ್ಮೂಲಗಳನ್ನು ಅನುವಾದಿಸಿ ಡಿಜಿಟೈಜ್ ಮಾಡಲು ಅಧಿಕೃತ ಸಂಸ್ಥೆ/ಪ್ರಕಾಶಕರು/ವ್ಯಕ್ತಿಗಳಿಂದ ಅನುಮತಿ ಪಡೆದುಕೊಂಡಿರುತ್ತದೆ. ಕೆಲವು ಸಂದರ್ಭಗಳಲ್ಲಿ, ಸಂಸ್ಥೆಯ ಹೆಸರು ದಾಖಲಾಗದಿದ್ದರೆ ಅಥವಾ ಮುದ್ರಿತ ಪುಸ್ತಕ ಅಥವಾ ಸಂಪನ್ಮೂಲದಲ್ಲಿ ಸಂಸ್ಥೆಯ ಹೆಸರು ನಮೂದಿಸಿರದಿದ್ದರೆ ಅಥವಾ ಹಕ್ಕುದಾರರು ವಿಶ್ವವಿದ್ಯಾಲಯದ ಸೂಚನೆಗಳಿಗೆ ಪ್ರತಿಕ್ರಿಯಿಸದಿದ್ದರೆ ಅಥವಾ ಯಾವುದೇ ಕಾರಣಕ್ಕಾಗಿ ಸ್ಪಷ್ಟ ಒಪ್ಪಿಗೆಯನ್ನು ಪಡೆಯಲು ವಿಶ್ವವಿದ್ಯಾಲಯಕ್ಕೆ ಸಾಧ್ಯವಾಗದಿದ್ದರೆ ಹಾಗೂ ಅಂತಹ ಸಂಪನ್ಮೂಲ/ಗಳು ಅಪರೂಪವಾಗಿದ್ದು, ಅದರ ಮುದ್ರಿತ ಪ್ರತಿಗಳು ಲಭ್ಯವಿರದಿದ್ದಲ್ಲಿ, ವಿಶ್ವವಿದ್ಯಾಲಯವು ಅಂತಹ ಸಂಪನ್ಮೂಲಗಳನ್ನು ಅನುವಾದಿಸಿ ಡಿಜಿಟೈಸ್ ಮಾಡುವ ಉಪಕ್ರಮಕ್ಕೆ ಮುಂದಾಗಿರುತ್ತದೆ.
- ಒಂದು ನಿರ್ದಿಷ್ಟ ಸಂಪನ್ಮೂಲ/ಗಳ ಹಕ್ಕುಸ್ವಾಮ್ಯ ಹೊಂದಿರುವವರು ಅನುವಾದ ಸಂಪದದಿಂದ ತತ್ಸಂಬಂಧಿತ ಸಂಪನ್ಮೂಲ/ಗಳನ್ನು ಅನುವಾದ ಸಂಪದದಲ್ಲಿ ಲಭ್ಯವಾಗದಂತೆ ಮಾಡಲು ಬಯಸಿದಲ್ಲಿ ಅಂತಹ ವಿನಂತಿಯನ್ನು repository.ti@apu.edu.in ಇಲ್ಲಿ ಸಂಪರ್ಕಿಸಿ ವಿನಂತಿಸಿಕೊಳ್ಳಬಹುದು. ವಿಶ್ವವಿದ್ಯಾಲಯವು ಸಂಪನ್ಮೂಲ/ಗಳ ಹಕ್ಕುಸ್ವಾಮ್ಯದಾರರ ಹಕ್ಕನ್ನು ಗೌರವಿಸುತ್ತದೆ. ಹಕ್ಕುಸ್ವಾಮ್ಯದಾರರಿಂದ ಈ ಮೇಲಿನ ನೋಟೀಸ್/ಸೂಚನೆ ಬಂದತಕ್ಷಣ ವಿಶ್ವವಿದ್ಯಾಲಯವು ನೋಟೀಸ್/ಸೂಚನೆಯನ್ನು ಗೌರವಿಸಿ ಸಂಬಂಧಿತ ಸಂಪನ್ಮೂಲ/ಗಳನ್ನು ತಕ್ಷಣವೇ ಕಣಜದಿಂದ ತೆಗೆದುಹಾಕುತ್ತದೆ.
- ಅನುವಾದ ಸಂಪದವು ಸಂಪನ್ಮೂಲಗಳ ಆನ್‌ಲೈನ್ ಕಣಜವಾಗಿದ್ದು ಅದನ್ನು ಸಂಪನ್ಮೂಲಗಳ ಪ್ರಕಾಶನ ವೇದಿಕೆಯೆಂದು ಪರಿಗಣಿಸತಕ್ಕದ್ದಲ್ಲ.

ಸಂಪರ್ಕಕ್ಕಾಗಿ:

- ಈ ನೀತಿನಿಯಮಗಳ ಕುರಿತು ಯಾವುದೇ ಪ್ರಶ್ನೆಗಳಿದ್ದಲ್ಲಿ, ದಯವಿಟ್ಟು **repository.ti@apu.edu.in** ಅನ್ನು ಸಂಪರ್ಕಿಸಿ.